


ಸಮುದಾಯ ಹಮ್ಮಿಕೊಂಡಿದ್ದ ಮೊದಲ ಜಾಥಾ ಮಡಿಕೇರಿಗೆ ತಲುಪಿದಾಗ ಅದನ್ನು ಉದ್ದೇಶಿಸಿ ಮಾತನಾಡುತ್ತಿರುವ ಸಮುದಾಯ ಸಂಸ್ಥಾಪಕರಲ್ಲಿ ಒಬ್ಬರಾದ ಪ್ರಸನ್ನ.



1991ರಲ್ಲಿ ಜರುಗಿದ ಎರಡನೆಯ ಸಮುದಾಯ ಜಿಲ್ಲಾವಾರು ಸಾಂಸ್ಕೃತಿಕ ಜಾಥಾ ರಾಜ್ಯದ ಎಲ್ಲೆಡೆ ಪ್ರಶ್ನೆಗಳನ್ನು ಪ್ರೇರೇಪಿಸಿತು.



ಬೆಂಗಳೂರ ಸಮುದಾಯಕ್ಕೆ ಗಂಗಾಧರಸ್ವಾಮಿ ಅವರು ನಿರ್ದೇಶಿಸಿದ 'ಕೊಂದು ಕೂಗಿತ್ತು ನೋಡಾ' ನಾಟಕದ ದೃಶ್ಯ.



ರಾಜ್ಯದ ಎಲ್ಲೆಡೆ ಸಂಚಲನ ಉಂಟು ಮಾಡಿದ ಹೊಸ ಮೌಲ್ಯಗಳತ್ತ ಸಮುದಾಯ ಸಾಂಸ್ಕೃತಿಕ ಜಾಥಾವನ್ನು 1989ರಲ್ಲಿ ಬೀದರ್‌ನಲ್ಲಿ ನಿರ್ದೇಶಕ ಎಂ.ಎಸ್. ಸತ್ಯು ಉದ್ಘಾಟಿಸಿದರು.

ಸಮುದಾಯ ಶುರುವಾಗಿದ್ದು ಬೆಂಗಳೂರಿನ ಅಂಗಳದಲ್ಲಾದರೂ ಅದಕ್ಕೆ ಸ್ಪಷ್ಟ ಉದ್ದೇಶವಿತ್ತು. 'ಅಕ್ಷರ ಮಾಧ್ಯಮದ ಮೂಲಕ ತಿದ್ದುವುದು ಪೂಜ್ಯ ಕೆಲಸವಾದರೆ ರಂಗಭೂಮಿಯ ಮೂಲಕ ತಿದ್ದುವುದು ಏಕೆ ಮೈಲಿಗೆಯಾಗಬೇಕು?' ಎಂದು ಪ್ರಶ್ನಿಸಿಕೊಂಡವರು 'ಸಮುದಾಯ'ವನ್ನು ಹುಟ್ಟುಹಾಕುವಾಗ ರಂಗಭೂಮಿಯ ಮೂಲಕ ಸಮಾಜ ಬದಲಾವಣೆ ಮಾಡುವುದನ್ನೇ ಕಣ್ಣ ಮುಂದೆ ತಂದುಕೊಂಡಿದ್ದರು. 'ಪ್ರಶ್ನೆ ಕೇಳುವುದಕ್ಕೆ ಹೆದರದಿರು ಒಡನಾಡಿ' ಎಂದಿದ್ದ ಬ್ರೆಕ್ಟ್. ಥೇಟ್ ಹಾಗೆಯೇ ಸಮುದಾಯ ತಂಡ ರಂಗಭೂಮಿಯ ಮೂಲಕ ಪ್ರಶ್ನೆಗಳನ್ನು ಜನರ ಮುಂದೆ ಹರಡುತ್ತಾ ಹೋಯಿತು.

ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನ ಅಂಗಳ ಅದೆಷ್ಟು ಹೊಸ ಕನಸುಗಳಿಗೆ ಬೀಜ ಬಿತ್ತಿದೆಯೋ. ಅದೇ ನೆಲವೇ ಸಮುದಾಯ ತಂಡ ಹುಟ್ಟಲೂ ಕಾರಣವಾಯಿತು. ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಪದವಿ ಪಡೆದ ಕನಸುಗಣ್ಣಿನ ಹುಡುಗ ಪ್ರಸನ್ನ ಬೆಂಗಳೂರಿಗೆ ಬಂದು ನಾಟಕ ನಿರ್ದೇಶಿಸಿದ್ದರು. ಅವರ ಮೊದಲ ನಾಟಕ 'ಕದಡಿದ ನೀರು'. ರಂಗಭೂಮಿ ಎನ್ನುವುದು ನಾಟಕ ಆಡುವುದು ಮಾತ್ರ ಅಲ್ಲ ಎಂದು ಕಂಡುಕೊಂಡಿದ್ದ ಪ್ರಸನ್ನನಿಗೆ ಜೊತೆಯಾದವರು ಕೆ. ಮರಳುಸಿದ್ದಪ್ಪ, ಕೆ.ವಿ. ನಾರಾಯಣ, ಕ.ವೆಂ. ರಾಜಗೋಪಾಲ, ಕಿ.ರಂ. ನಾಗರಾಜ, ಸಿ. ವೀರಣ್ಣ ಹಾಗೂ ಅಂತಹದೇ ತಹತಹ ಹೊಂದಿದ್ದ ಹಲವರು.

ಅದು 1975ರ ಸಮಯ. ಸಮುದಾಯ ಕಣ್ಣು ಅರಳಿಸಿತು.

'ಮೈಸೂರು ರಾಜ್ಯದ ದೊರೆಯೇ' ಎಂದು ದನಿ ತೆಗೆದಾಗ ಎಲ್ಲರಿಗೂ ರೋಮಾಂಚನವಾಗಲು ಕಾರಣವೂ ಅದೇ. ಸಮುದಾಯದ ಮೊದಲ ನಾಟಕ ಸಂಸರ 'ವಿಗಡ ವಿಕ್ರಮರಾಯ'. ಸಮುದಾಯ ತನ್ನ ಮೊದಲ ನಾಟಕದಲ್ಲೇ ತಾನು